ದಿನಾಂಕ 15-03-2025 ರಂದು ಸಾಕ್ಷಿಯನ್ನು ಮರಳಿ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟಿಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಬಿ.ಹೆಚ್ ವಕೀಲರಿಂದ**

21) ಆದಿನ 1 ನೇ ಅರೋಪಿಯ ಕೈತೊಳೆದಾಗ ಧ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿರಲಿಲ್ಲ ಎಂದರೆ ಸರಿಯಲ್ಲ. ಎಂಒ-5 ಮತ್ತು 6 ರ ಸೀಸೆಗಳಲ್ಲಿಯ ಧ್ರಾವಣ ಈಗ ಬಿಳಿ ಬಣ್ಣದಾಗಿದೆ ಎಂದರೆ ನಿಜ. ಸದರಿ ಸೀಸೆಯಲ್ಲಿಯ ಧ್ರಾವಣ ಮೊದಲಿನಿಂದಲೂ ಬಿಳಿ ಬಣ್ಣದ ಧ್ರಾವಣವೇ ಅಗಿತ್ತು ಎಂದರೆ ಸರಿಯಲ್ಲ. 1 ನೇ ಅರೋಪಿ ನನ್ನ ಬಳಿ ಯಾವುದೇ ಹಣದ ಬೇಡಿಕೆ ಇಟ್ಟಿಲ್ಲ ಮತ್ತು ನನ್ನಿಂದ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನಿಪಿ-2 ರಂತೆ ಯಾವುದೇ ಪ್ರಕ್ರಿಯೇಗಳನ್ನು ಠಾಣೆಯಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ.

**ಪಾಟಿಸವಾಲುಃ 2 ನೇ ಆರೋಪಿ ಪರ ಶ್ರೀ ಎಸ್.ಎ. ವಕೀಲರಿಂದ**

22) 2 ನೇ ಅರೋಪಿಯನ್ನು ನಾನು ಮೊದಲ ಬಾರಿಗೆ ಭೇಟಿಯಾಗಿದ್ದು 16 ನೇ ತಾರೀಕಿನಂದು, ಅದು 1 ನೇ ಆರೋಪಿಯ ಕೋಣೆಗೆ ಹೋಗಿ ಭೇಟಿಯಾಗಿ ಬಂದ ನಂತರ ಅವರನ್ನು ಭೇಟಿಯಾಗಿದ್ದೆ. 2 ನೇ ಆರೋಪಿಯೊಂದಿಗೆ ಮಧ್ಯಾಹ್ನದ 1 ಗಂಟೆಯ ನಂತರ 2 ಗಂಟೆಯ ಒಳಗೆ 1 ನೇ ಆರೋಪಿಯ ಕೋಣೆಯ ಹೊರಗೆ ಮಾತುಕತೆ ಮಾಡಿದ್ದೆ. ಚಾಸಾ-20 ಮತ್ತು ಸಿಬ್ಬಂದಿಯವರು 1 ನೇ ಆರೋಪಿಯ ಕೋಣೆಗೆ ಹೋದಾಗ 2 ನೇ ಆರೋಪಿ ಇರಲಿಲ್ಲ ಎಂದರೆ ನಿಜ. 2 ನೇ ಅರೋಪಿಯನ್ನು ಪೊಲೀಸರು 1 ನೇ ಅರೋಪಿಯ ಕೋಣೆಗೆ ಹೋದಾಗ 10 ರಿಂದ 15 ನಿಮಿಷಗಳ ಒಳಗಾಗಿ 2 ನೇ ಆರೋಪಿಯನ್ನು ಕರೆಸಿದ್ದರು. 2 ನೇ ಅರೋಪಿಯನ್ನು ಕೋಣೆಗೆ ಕರೆತಂದ ತಕ್ಷಣವೇ ಅವರ ಕೈಗಳನ್ನು ತೊಳೆಸಿದ್ದರು. 2 ನೇ ಅರೋಪಿಯ ಕೈತೊಳೆಸಿದ ಪ್ರಕ್ರಿಯೇ ಸುಮಾರು 10–15 ನಿಮಿಷ ನಡೆದಿರಬಹುದು.

23) 2 ನೇ ಅರೋಪಿಯನ್ನು ಪಾರ್ಕಿಂಗ್ ಏರಿಯಾಕ್ಕೆ ಕರೆದುಕೊಂಡು ಹೋಗಿದ್ದು ನನಗೆ ಗೊತ್ತಿಲ್ಲ. 2 ನೇ ಅರೋಪಿಯನ್ನು ಹೊರಗೆ ಕರೆದುಕೊಂಡು

ಹೋದಾಗ ನಾನು 1 ನೇ ಆರೋಪಿಯ ಕೋಣೆಯಲ್ಲಿ ಇದ್ದೆ. ಅಂಡರ್ ಗ್ರೌಂಡ್ ಪಾರ್ಕಿಂಗ್ ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. 2 ನೇ ಆರೋಪಿಯನ್ನು ಕೋಣೆಯಿಂದ ಹೊರಗೆ ಕರೆದುಕೊಂಡು ಹೋದ 10 – 15 ನಿಮಿಷದಲ್ಲಿ ಮರಳಿ ಕರೆತಂದಿದ್ದರು. 2 ನೇ ಆರೋಪಿಯನ್ನು ಒಳಗೆ ಕರೆದುಕೊಂಡು ಬಂದ ನಂತರ ಪುನಃ ಕರೆದುಕೊಂಡು ಹೋಗಿದ್ದರಾ ಎಂದರೆ, ಅದು ನನಗೆ ನೆನಪಿಲ್ಲ. ನಾನು ಆಗ ನಡೆಯುತ್ತಿದ್ದ ನಡವಳಿಗಳನ್ನು ಗಮನಿಸುತ್ತಿದ್ದುದರಿಂದ 2 ನೇ ಆರೋಪಿಯನ್ನು ಕರೆದುಕೊಂಡು ಹೋಗಿ, ಬಂದಿದ್ದ ಬಗ್ಗೆ ಗಮನಿಸಿಲ್ಲ. 2 ನೇ ಅರೋಪಿಯನ್ನು ಎಷ್ಟು ಬಾರಿ ಕರೆದುಕೊಂಡು ಹೋಗಿ ಬಂದಿದ್ದರು ಎಂದು ನಾನು ಗಮನಿಸಿಲ್ಲ. 2 ನೇ ಅರೋಪಿಯನ್ನು ಚೇಂಬರ್ ನಿಂದ ಎರಡನೇ ಬಾರಿ ಹೊರಗಡೆ ಕರೆದುಕೊಂಡು ಹೋಗುವಾಗ ಯಾರು ಅವರೊಂದಿಗೆ ಹೋಗಿದ್ದರು ಎಂದು ಈಗ ನೆನಪಿಲ್ಲ. 2 ನೇ ಆರೋಪಿಯನ್ನು ಕೋಣೆಯಿಂದ ಹೊರಗೆ ಕರೆದುಕೊಂಡು ಹೋದಾಗ ಆತನೊಂದಿಗೆ ಚಾಸಾ -20 ಮತ್ತು ಇನ್ನು ಇಬ್ಬರು ಪೊಲೀಸರು ಹೋಗಿದ್ದರು, ಅವರ ಹೆಸರು ಗೊತ್ತಿಲ್ಲ.

24) 2 ನೇ ಆರೋಪಿಯ ಕೈಗಳನ್ನು ತೊಳೆದಾಗ ಎಷ್ಟು ಗಂಟೆ ಆಗಿತ್ತು ಎಂದು ನಾನು ಗಮನಿಸಿಲ್ಲ. 2 ನೇ ಅರೋಪಿಯ ಕೈತೊಳೆದಾಗ ಧ್ರಾವಣದ ಬಣ್ಣ ಬದಲಾಗಿಲ್ಲ ಎಂದರೆ ಸರಿಯಲ್ಲ. ಎಂಒ-8 ಮತ್ತು 9 ರ ಸೀಸೆಗಳಲ್ಲಿರುವ ದ್ರವದ ಬಣ್ಣ ಈಗ ಬಿಳಿ ಎಂದರೆ ನಿಜ. ನಾನು ಹೇಳಿದಂತೆ 2 ನೆ ಆರೋಪಿಯಿಂದ ಹಣವನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ಸತೀಶ್ ಎಂಬ ಸಿಬ್ಬಂದಿ ಪಾರ್ಕಿಂಗ್ ಏರಿಯಾದಿಂದ ನೀಲಿ ಬಣ್ಣದ ಪರ್ಸ್‌ನ್ನು 1 ನೇ ಅರೋಪಿ ಇರುವ ಕೋಣೆಗೆ ತಂದಿದ್ದರು ಎಂದರೆ ಸರಿಯಲ್ಲ. 2 ನೇ ಅರೋಪಿತನ ಕೈಗಳನ್ನು ಪೊಲೀಸರು ಹಿಡಿದುಕೊಂಡಿದ್ದನ್ನು ನೋಡಿದ್ದೇನೆ, ಅದನ್ನು ಯಾವ ರೀತಿ ಹಿಡಿದಿದ್ದರು ಎಂದರೆ, ಪಕ್ಕದಲ್ಲಿಯೇ ನಿಂತು ಹಿಡಿದಿದ್ದರು. 2 ನೇ ಅರೋಪಿಯ ಎರಡು ಕೈಗಳನ್ನು ಭುಜದ ಎತ್ತರಕ್ಕೆ ಎತ್ತಿ, ಅಗಲ ಮಾಡಿ, ಹಿಡಿದುಕೊಂಡು ಬಂದದ್ದು ಇದೆಯಾ ಎಂದರೆ, ಅದು ಈಗ ನೆನಪಿಲ್ಲ. 2 ನೇ ಅರೋಪಿತನ ಕೈಗಳನ್ನು ತೊಳೆದದ್ದು ಒಂದನೇ ಬಾರಿ ಬಂದಾಗಲೋ, 2 ನೇ ಬಾರಿಗೆ ಬಂದಾಗಲೋ ಎಂದರೆ, 1 ನೇ ಬಾರಿಗೆ ಬಂದಾಗ ಅನಿಸುತ್ತದೆ. ಒಂದನೇ ಬಾರಿ 2 ನೇ ಆರೋಪಿಯ ಕೈಗಳನ್ನು ತೊಳೆಯದೇ, ಅವರನ್ನು ಹೊರಗೆ ಕರೆದುಕೊಂಡು

ಹೋಗಿ, ಕೈಗೆ ಫಿನಾಪ್ತಲೀನ್ ಪುಡಿಯನ್ನು ಲೇಪಿಸಿ, ಕರೆತಂದು, ನಂತರ ಕೈ ತೊಳೆಸಲಾಗಿದೆ ಎಂದರೆ ಗೊತ್ತಿಲ್ಲ.

25) 2 ನೇ ಆರೋಪಿಯಿಂದ ಪೊಲೀಸರು ಆದಿನ ಸಮಜಾಯಿಷಿಯನ್ನು ಪಡೆದ ಬಗ್ಗೆ ಗೊತ್ತು. 2 ನೇ ಆರೋಪಿ ಆದಿನ ಅವರ ಕೋಳಿ ಮಾರಿದ ಹಣವನ್ನು ತಂದು, ಸ್ಕೂಟರ್ ನ ಡಿಕ್ಕಿಯಲ್ಲಿ ಇಟ್ಟಿರುವುದನ್ನು ಪೊಲೀಸರು ಜಪ್ತು ಮಾಡಿದ್ದರು ಎಂದು ಹೇಳಿಕೆ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ನಿಪಿ-4 ರ ಪ್ರಕ್ರಿಯೇ ನಂತರ ನಾನು ಪೊಲೀಸ್ ಠಾಣೆಗೆ ಒಂದು ಬಾರಿ ಮಾತ್ರವೇ ಹೋಗಿದ್ದೇನೆ. ನಾನು ಹೇಳುವ ರೀತಿಯಲ್ಲಿ 2 ನೇ ಆರೋಪಿ ಯಾವುದೇ ಹಣ ಕೇಳಿಲ್ಲ ಮತ್ತು ಆತನಿಂದ ಪೊಲೀಸರು ಯಾವುದೇ ಹಣವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಕೊಟ್ಟ ಒಂದು ಸುಳ್ಳು ದೂರಿಗಾಗಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಸಮಯದಲ್ಲಿ ಡಿವಿಆರ್ ನ್ನು ಚಾಸಾ-6 ಇವರ ಸಹಾಯದಿಂದ ನ್ಯಾಯಾಲಯದ ಸಿಪಿಯು ಮೂಲಕ ಪ್ಲೇ ಮಾಡಿ, ನೋಡಿ, **ಮುಂದುವರಿದ 1 ನೇ ಆರೋಪಿ ಪರ ಪಾಟೀಸವಾಲುಃ**

26) ಈಗ ಕ್ಯಾಮರಾ ನಂಬ್ರ -8 ರ ತಾರೀಕು 16-03-2019 ರ 1 ಗಂಟೆ 28 ನಿಮಿಷ 10 ಸೆಕೆಂಡ್ ಗಳಲ್ಲಿ ಕಂಡುಬರುವ ಇಬ್ಬರು ವ್ಯಕ್ತಿಗಳು ನಾನು ಮತ್ತು ಚಾಸಾ-4 ಎಂದರೆ ನಿಜ. ಅಲ್ಲಿ ಕುಳಿತ್ತಿರುವ ವ್ಯಕ್ತಿ 1 ನೇ ಆರೋಪಿ. ಇದೇ ಸಮಯದ 20 ರಿಂದ 28 ನೇ ಸೆಕೆಂಡ್‌ನಲ್ಲಿ ಕಂಡುಬರುವಂತೆ 1 ನೇ ಆರೋಪಿ ಆ ಹಣವನ್ನು ನನಗೆ ಮರಳಿಸಿದ್ದಾರೆ ಎಂದರೆ, ಅದನ್ನು 2 ನೇ ಆರೋಪಿಯ ಬಳಿ ಕೊಡು ಎಂದು ಹೇಳಿದ್ದರು. ಆಗ ಆ ಹಣವನ್ನು ನಾನು ಮರಳಿ ಪಡೆದು, ಹೊರಗೆ ಹೋಗಿದ್ದೆ ಎಂದರೆ ನಿಜ. ಆ ಸಮಯದಲ್ಲಿ 1 ನೇ ಅರೋಪಿ ಹಣವನ್ನು 2 ನೇ ಅರೋಪಿಯ ಬಳಿಯಲ್ಲಿ ಕೊಡಲು ಹೇಳಿಲ್ಲ ಎಂದರೆ ಸರಿಯಲ್ಲ.

27) 1 ನೇ ಆರೋಪಿಯ ಕೋಣೆಗೆ ನಾನು ಪುನಃ 2 ಗಂಟೆ 10 ನಿಮಿಷಕ್ಕೆ ಬಂದಿದ್ದೆ ಎಂದರೆ ನಿಜ. 2 ಗಂಟೆ 13 ನಿಮಿಷ 27 ಸೆಕೆಂಡ್‌ಗೆ ನಾನು ಹೊರಗೆ ಬಂದಿದ್ದೆ ಎಂದರೆ ನಿಜ. ಆಗ ನನ್ನ ಕೈಯಲ್ಲಿ ಯಾವುದೇ ದಾಖಲಾತಿ ಇರಲಿಲ್ಲ. 2 ಗಂಟೆ 18 ನಿಮಿಷ 32 ಸೆಕೆಂಡ್ ಗಳ ಸಮಯದಲ್ಲಿ ದಾಖಲೆಗಳೊಂದಿಗೆ ನಾನು 1 ನೇ ಅರೋಪಿಯ ಕೋಣೆಯ ಒಳಗೆ ಬರುತ್ತಿದ್ದೇನೆ. ಆ ದಾಖಲೆಗಳನ್ನು ನಾನು

1 ನೇ ಅರೋಪಿಯ ಕಚೇರಿಯಲ್ಲಿ ಕೇಳಿದ ದಾಖಲೆಗಳು ಎಂದರೆ ನಿಜ. ಈ ದಾಖಲೆಗಳನ್ನು ಒದಗಿಸಲು 1 ನೇ ಆರೋಪಿ ಹಣ ಕೇಳಿದ್ದರು ಎಂದು ನಾನು ದೂರು ಕೊಟ್ಟಿದ್ದೆ ಎಂದರೆ ನಿಜ. ನಾನು ಪೊಲೀಸರೊಂದಿಗೆ ಸೇರಿ ಆರೋಪಿಗೆ ತೊಂದರೆ ಕೊಡಲು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀಸವಾಲುಃ 2 ನೇ ಆರೋಪಿ ಪರವಾಗಿ**

28) 2 ಗಂಟೆ 28 ನಿಮಿಷ 57 ಸೆಕೆಂಡ್ ಗೆ 2 ನೇ ಆರೋಪಿಯನ್ನು ಪೊಲೀಸರು ಹಿಡಿದು, ಕೂರಿಸಿರುತ್ತಾರೆ ಎಂದರೆ ನಿಜ

(ಈ ಹಂತದಲ್ಲಿ ಸಮಯ 4-55 ಆಗಿರುವುದರಿಂದ ಹೆಚ್ಚಿನ ಪಾಟೀಸವಾಲನ್ನು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್.ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ